# ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ ಸಾಗರ.

## ಸಿ.ಸಿ. ನಂ. 2300/2024

ಫಿರ್ಯಾದುದಾರರು ಸಾಗರ ಟೌನ್ ಪೊಲೀಸ್.

ವಿರುದ್ಧ

ಆರೋಪಿತರುಃ- 1) ಮಹೇಶ ಅಲಿಯಾಸ್ ಬಸವರಾಜ ಬೋವಿ.

| | | |
|---|---|---|
| 1 ನೇ ಆರೋಪಿತನ ಹೆಸರು | - | ಮಹೇಶ ಅಲಿಯಾಸ್ ಬಸವರಾಜ ಬೋವಿ. |
| ತಂದೆಯ ಹೆಸರು | - | ಬಸವರಾಜ ಬೋವಿ. |
| ವಯಸ್ಸುಃ | - | 29 ವರ್ಷ, |
| ಉದ್ಯೋಗ | - | ಕೂಲಿ. |
| ವಾಸಃ | - | ರಾಮನಗರ, 3 ನೇ ತಿರುವು, ಸಾಗರ ಟೌನ್. |
| ಖಾಯಂ ವಿಳಾಸಃ- | - | ಹಾರ್ಸಿಕಟ್ಟಾ, ಸಿದ್ದಾಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. |

## ದೋಷಾರೋಪಣೆ

ಸಾಗರದ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಧೀಶರಾದ ದೀಪ ಕೆ.ಆರ್., ಬಿ.ಎ.ಎಲ್. ಎಲ್‌ಎಲ್.ಬಿ., ಆದ ನಾನು ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಣೆ ಹೊರಿಸುತ್ತೇನೆ.

ದಿನಾಂಕ *20.03.2023* ರಂದು ರಾತ್ರಿ *8.30* ಗಂಟೆ ಸಮಯದಲ್ಲಿ ಸಾಗರ ಟೌನ್ ರಾಮನಗರದ *02* ನೇ ಕ್ರಾಸ್ ನಲ್ಲಿರುವ ಚಾಸಾ-*01* ರವರು ತಮ್ಮ ಮನೆ ಎದುರು ನಿಂತಿರುವುವಾಗ ಆರೋಪಿತರಾದ ನೀವು ಚಾಸಾ-*01* ರವರ ಮನೆಯ ಎದುರು ಬಂದಾಗ ಚಾಸಾ-*01* ರವರು ತಾವು ಕೆಲಸ ಮಾಡಿದ ಹಣ ಕೊಡುವಂತೆ ಕೇಳಿದಾಗ ಆರೋಪಿಯಾದ ನೀವು ಚಾಸಾ-*01* ರವರಿಗೆ ನನ್ನ ಹತ್ತಿರ ಸಾಲದ ರೂಪದಲ್ಲಿ ಹಣ ತೆಗೆದುಕೊಂಡಿದ್ದಿಯಾ ನಿನ್ನ ಸಂಬಳದ ಹಣ ಕೊಡುವುದು ಯಾವುದೂ ಇರುವುದಿಲ್ಲ ನೀನೇ ನನಗೆ ಹಣ ಕೊಡಬೇಕು ಎಂದು ಹೇಳಿ ಚಾಸಾ-*01* ರವರನ್ನು ಮುಂದೆ ಹೋಗದಂತೆ ಅಡ್ಡಗಟ್ಟಿ ತಡೆದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ *341* ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ವಿಷಯವಾಗಿ ಆರೋಪಿಯಾದ ನೀವು ಚಾಸಾ-*01* ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ *504* ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ವಿಷಯವಾಗಿ ಆರೋಪಿಯಾದ ನೀವು ಚಾಸಾ-*01* ರವರಿಗೆ ಕೈಯಿಂದ ಮೈ ಕೈಗೆ ಹೊಡೆದು, ಕಾಲಿನಿಂದ ನೆಲಕ್ಕೆ ಹಾಕಿ ತುಳಿದು ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ *323* ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ವಿಷಯವಾಗಿ ಆರೋಪಿಯಾದ ನೀವು ಚಾಸಾ-*01* ರವರಿಗೆ ಹಂಚಿನಿಂದ ತಲೆಯ ಹಿಂಭಾಗಕ್ಕೆ ಹೊಡೆದು ರಕ್ತಗಾಯಪಡಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ *324* ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಕೊನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ವಿಷಯವಾಗಿ ಆರೋಪಿಯಾದ ನೀವು ಚಾಸಾ-*01* ರವರಿಗೆ ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ *506* ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಆದ್ದರಿಂದ ನಿಮ್ಮ ಮೇಲೆ ಮುಂದಿನ ಕೇಸು ನಡೆಸುವಂತೆ ನಿರ್ದೇಶಿಸಿದ

ದಿನಾಂಕಃ 08.09.2025.

(ದೀಪ ಕೆ.ಆರ್.)
ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.

**ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ ಸಾಗರ.**

ಸಿ.ಸಿ. ನಂ. 2300/2024

**ಆರೋಪಿಯ ಹೇಳಿಕೆ**

1 ನೇ ಆರೋಪಿಯ ಹೆಸರುಃ  ಮಹೇಶ ಅಲಿಯಾಸ್ ಬಸವರಾಜ ಬೋವಿ.

ಪ್ರ.1- ನಿಮಗೆ ಈ ಕೇಸಿನಲ್ಲಿ ಮಾಡಿರುವ ಆರೋಪಣೆಯನ್ನು ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಲಾಗಿದ್ದು, ಮನವರಿಕೆಯಾಯಿತೇ?

ಉತ್ತರಃ-

ಪ್ರ.2- ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?

ಉತ್ತರಃ-

(ದಿಃ 08.09.2025 ರಂದು ಆರೋಪಿಯಿಂದ ನೀಡಲ್ಪಟ್ಟಿದೆ ಎಂದು ಪ್ರಮಾಣೀಕರಿಸಿದೆ).

(ದೀಪ ಕೆ.ಆರ್.)
ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.